# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-41ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ಎಂದಿನಂತೆ ದಿನಾಂಕ: 17.09.2022 ರಂದು ಬೆಳಿಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.41, ಪೀಣ್ಯ ವಾರ್ಡ್ ಸಮಿತಿ ಸಭೆಯನ್ನು ಗೊರಗುಂಟೆಪಾಳ್ಯ ಉಪವಿಭಾಗದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.**

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1. ಶ್ರೀ.ಹೆಚ್.ಭೀಮೇಶ್, ಕಾರ್ಯಪಾಲಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಬಿಬಿಎಂಪಿ. ಹಾಗೂ ವಾರ್ಡ್ 41ರ ನೋಡಲ್ ಅಧಿಕಾರಿಗಳು.
2. ಶ್ರೀ.ರಾಜೇಶ್.ಬಿ.ಎನ್. ಕಿರಿಯ ಅಭಿಯಂತರರು, ವಾರ್ಡ್ ನಂ.41.
3. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.41.
4. ಶ್ರೀಮತಿ.ತನುಜಾ. ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.41
5. ಶ್ರೀ. ಸಂದೀಪ್, ಸಹಾಯಕ ಅಭಿಯಂತರರು ಬಿ.ಡ್ಲ್ಯೂ ಎಸ್.ಎಸ್.ಬಿ. ವಾರ್ಡ್ 41.
6. ಶ್ರೀ. ಸತೀಶ್, ಕಂದಾಯ ವಸೂಲಿಗಾರರು, ವಾರ್ಡ್ ನಂ.41.
7. ಶ್ರೀ. ನಾಗೇಶ್.ಹೆಚ್. ಪ್ರೆಸಿಡೆಂಟ್, ವಾರ್ಡ್ ನಂ.41
8. ಶ್ರೀಮತಿ.ಮೋಹಿನಿ.ಬಿ.ಕೆ. ಲಿಂಕ್ ವರ್ಕರ್ ವಾರ್ಡ್ ನಂ.41.
9. ಶ್ರೀಮತಿ.ಭಾರತಿ.ಎ. ಲಿಂಕ್ ವರ್ಕರ್ ವಾರ್ಡ್ ನಂ.41.
10. ಶ್ರೀ.ನಾರಾಯಣ್.ಎ.ಆರ್. ಎ.ಎಸ್.ಐ. ಪೀಣ್ಯ ಪೊಲೀಸ್ ಠಾಣೆ.
11. ಶ್ರೀ.ರಾಮಕೃಷ್ಣಯ್ಯ.ಆರ್. ಪಿ.ಎಸ್.ಐ. ಸಂಚಾರ ಪೀಣ್ಯ ಪೊಲೀಸ್ ಠಾಣೆ.
12. ಶ್ರೀ.ಸತೀಶ್. ಕಿರಿಯ ಅಭಿಯಂತರರು, ಬೆಸ್ಕಾಂ

ವಾರ್ಡ್-41ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ಆದ ರಾಜೇಶ್.ಬಿ.ಎನ್ ರವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ವಾರ್ಡ್ ಕಮಿಟಿ ಪ್ರೆಸಿಡೆಂಟ್ ಆದ ಶ್ರೀ.ನಾಗೇಶ್ ರವರು ಮಾತನಾಡಿ ಪೀಣ್ಯ ಪೊಲೀಸ್ ಠಾಣೆ ರಸ್ತೆ ಯಿಂದ ಟಿ.ವಿ.ಎಸ್. ಕ್ರಾಸ್. ರಸ್ತೆಯ ವರೆಗೆ ಬೀದಿ ದೀಪಗಳು ಉರಿಯುತ್ತಿಲ್ಲವಾದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ದುರಸ್ಥಿಗೊಳಿಸಲು ವಿನಂತಿಸಿದರು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್(ರಾರಾನಗರ)ವಲಯ ಬಿ.ಬಿ.ಎಂ.ಪಿ.**

ಶ್ರೀ.ನಾಗೇಶ್ ರವರು ಮುಂದುವರೆದು ಜಾಲಹಳ್ಳಿ ಕ್ರಾಸ್ ಯಿಂದ ಸಿ.ಎಂ.ಟಿ.ಐ. ಕಂಪನಿ ವರೆಗೂ ಸರ್ವೀಸ್ ರಸ್ತೆಯಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಸಂಬಂದಪಟ್ಟವರಿಗೆ ವಿನಂತಿಸಿದರು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು ವಿದ್ಯುತ್(ರಾರಾನಗರ)ವಲಯ ಬಿ.ಬಿ.ಎಂ.ಪಿ.**

ವಾರ್ಡಿನ ಸದಸ್ಯರಾದ ಶ್ರೀ.ಎಂ.ಕೃಷ್ಣಮೂರ್ತಿ ರವರು ಮಾತನಾಡಿ ಎಸ್.ಆರ್.ಎಸ್. ರಸ್ತೆಯಲ್ಲಿ ಮುಂಜಾನೆ ಸಮಯಲ್ಲಿ ಹಾಗೂ ಸಂಜೆ ಸಮಯದಲ್ಲಿ ಸರಗಳ್ಳತನ, ಮೊಬೈಲ್ ಕಳ್ಳತನಗಳು ಹೆಚ್ಚಾಗಿ ನಡೆಯುತ್ತಿದ್ದು, ಪೋಲಿಸ್ ಇಲಾಖೆ ರವರು ಗಸ್ತುವನ್ನು ಹೆಚ್ಚಿಸಲು ವಿನಂತಿಸಿದರು.

**ಕ್ರಮ : ಪೀಣ್ಯ ಪೋಲಿಸ್ ಠಾಣೆ, ಪೀಣ್ಯ**

ಟಿ.ವಿ.ಎಸ್. ಕ್ರಾಸ್ ರಸ್ತೆ ಯಿಂದ ಪೀಣ್ಯ ಪೋಲಿಸ್ ಠಾಣೆ ರಸ್ತೆಯ ವರೆಗೆ ತುಂಬಾ ಗುಂಡಿಗಳು ಇದ್ದು ಸಾರ್ವಜನಿಕರ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು, ಕೂಡಲೇ ಗುಂಡಿಗಳನ್ನು ಮುಚ್ಚಿಸಲು ಕೋರಿದರು

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ರೋಡ್ ಇನ್ಫ್ರಾ, (ರಾರಾನಗರ)ವಲಯ**

ಆಶ್ರಯನಗರದಲ್ಲಿರುವ ಇಂದಿರಾ ಕ್ಯಾಂಟೀನ್ ಪಕ್ಕದಲ್ಲಿ ಇರುವ ಸ್ಯಾನಿಟರಿ ಚೇಂಬರ್ ಒಡೆದಿದ್ದು ಅಲ್ಲಿ ಉಪಹಾರ ಸೇವಿಸಲು ಬರುವ ಸಾರ್ವಜನಿರಿಗೆ ತೊಂದರೆಯಾಗಿದ್ದು, ಹಾಗೂ ಮ್ಯಾನ್‌ಹೋಲ್ ಮುಚ್ಚಳಗಳು ಒಡೆದಿದ್ದು, ಹೊಸದಾಗಿ ಮುಚ್ಚಳಗಳನ್ನು ಹಾಕುವಚಿತೆ ಸಂಬಂಧಪಟ್ಟ ಅಧಿಕಾರಿಗಳಿಗೆ ವಿನಚಿತಿಸಿದರು.

**ಕ್ರಮ : ಸ.ಕಾ.ಅ ಬಿ.ಡ್ಲ್ಯೂ.ಎಸ್.ಎಸ್.ಬಿ.(ಎನ್.ಡ್ಲ್ಯೂ-2)**

ಎಸ್.ಆರ್.ಎಸ್. ರಸ್ತೆಯ ಪಾರ್ಕ್ ಬಳಿ ಡೆಲ್ಕರ್ ಕಂಪನಿ ರವರು ಪಾರ್ಕ್ ಮುಂದಿನ ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದು, ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು, ಕೂಡಲೇ ತೆರವುಗೊಳಿಸಲು ವಿನಚಿತಿಸಿದರು.

**ಕ್ರಮ : ಸಂಚಾರಿ ಪೋಲಿಸ್ ಪೀಣ್ಯ**

ಎಸ್.ಆರ್.ಎಸ್ ರಸ್ತೆಯಲ್ಲಿ ಮರಗಳ ಕೊಂಬೆಯು ಬೀದಿ ದೀಪಗಳಿಗೆ ಅಡ್ಡಲಾಗಿ ಬೆಳೆದಿದ್ದು, ಇದರಿಂದ ಸಾರ್ವಜನಿಕರಿಗೆ ಬೆಳಕಿನ ಕೊರತೆ ಉಚಿಟಾಗಿರುತ್ತದೆ ಆದ್ದರಿಂದ ತೆರವುಗೊಳಿಸಲು ವಿನಚಿತಿಸಿದರು.

ಕ್ರಮ : ಅರಣ್ಯ ವಿಭಾಗ, ಬಿ.ಬಿ.ಎಂ.ಪಿ. (ರಾರಾನಗರ) ವಲಯ

ಶಾಂತಿನಿಕೇತನ ಅಪಾರ್ಟ್‌ಮೆಂಟ್ ಮುಂಭಾಗದ ಚರಂಡಿ ಬ್ಲಾಕ್ ಆಗಿದ್ದು, ಹಾಗೂ ಪಾದಚಾರಿ ಮಾರ್ಗವನ್ನು ದುರಸ್ಥಿಗೊಳಿಸಲು ಕೂಡಲೇ ಕಾರ್ಯಯೋಜನೆಯ ಅಡಿಯಲ್ಲಿ ಅಂದಾಜುಪಟ್ಟಿಯನ್ನು ಸಿದ್ದಪಡಿಸಿ ಕೆಲಸ ಕೈಗೊಳ್ಳಲು ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆ ಪಾಳ್ಯ ಉಪ ವಿಭಾಗ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಹೆಚ್.ಬೀಮೇಶ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Rajesh B.M.
ಕಿರಿಯ ಅಭಿಯಂತರರು
ಮತ್ತು ಸದಸ್ಯ ಕಾರ್ಯದರ್ಶಿ
ವಾರ್ಡ್–41.

24/9/12
ವಾರ್ಡ್ ನೋಡಲ್ ಅಧಿಕಾರಿ ಹಾಗೂ
ಕಾ.ಪಾ.ಅ (ಎಸ್.ಡ್ಬ್ಯೂ.ಎಂ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ